# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂವಿ/ಕುಸ/ಸಿಂಡಿ/5/ಎಸ್2/2025/86033

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ-574199
ದಿನಾಂಕ: 01.04.2025

ರಿಗೆ:

**ಶೈಕ್ಷಣಿಕ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ.**

ಮಾನ್ಯರೇ,

ವಿಷಯ: ದಿನಾಂಕ 25.03.2025ರಂದು ಆನ್‌ಲೈನ್ ಮೂಲಕ ನಡೆದ ಶೈಕ್ಷಣಿಕ ಮಂಡಳಿಯ 2024-25ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಯ ಬಗ್ಗೆ.

------

ದಿನಾಂಕ 25.03.2025 ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಆನ್‌ಲೈನ್ ಮೂಲಕ ನಡೆದ ಶೈಕ್ಷಣಿಕ ಮಂಡಳಿಯ 2024-25ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಯನ್ನು ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ನಡವಳಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ 15 ದಿನಗಳೊಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು.

**ಪ್ರತಿಗಳು:**

1. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001 - ಇವರ ಗಮನಕ್ಕೆ.
2. ಸರಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.
3. ನಿರ್ದೇಶಕರು, ಐ.ಕ್ಯೂ.ಎ.ಸಿ., ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 25.03.2025 ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2024-25ನೇ ಸಾಲಿನ ಚತುರ್ಥ ಸಾಮಾನ್ಯ (ಆನ್ ಲೈನ್) ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು, ಆನ್ ಲೈನ್ ನಲ್ಲಿ ಭಾಗವಹಿಸಿರುವ ಎಲ್ಲಾ ಸದಸ್ಯರುಗಳನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಸಭೆಯಲ್ಲಿ ಹಾಜರಿರುವ ಎಲ್ಲಾ ಅಧಿಕಾರಿಗಳನ್ನು ಹಾಗೂ ಆಡಳಿತ ಸಿಬ್ಬಂದಿಯನ್ನು ಸಭೆಗೆ ಸ್ವಾಗತಿಸಿ, ಸಭಾಧ್ಯಕ್ಷರಲ್ಲಿ ಸಭೆಯನ್ನು ಮುಂದುವರಿಸುವಂತೆ ಕೋರಿದರು. ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನೂ ಸಭೆಗೆ ಸ್ವಾಗತಿಸಿ, ಆನ್ ಲೈನ್ ಸಭೆಯನ್ನು ಪ್ರಾರಂಭಿಸಿದರು.

- **ಸ್ವಾಗತ:**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(ii) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸದಸ್ಯರಾಗಿರುವ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಗಳಲ್ಲಿ ಭಾಗವಹಿಸಲು ಪ್ರತ್ಯಾಯೋಜಿಸಲಾಗಿರುವ ಮಂಗಳೂರಿನ ಪ್ರಾದೇಶಿಕ ಕಚೇರಿಯ ಜಂಟಿ ನಿರ್ದೇಶಕರಾದ **ಡಾ. ಕವಿತಾ ಕೆ.ಆರ್.** ಇವರನ್ನು ಶೈಕ್ಷಣಿಕ ಮಂಡಳಿ ಸಭೆಗೆ ಸ್ವಾಗತಿಸಲಾಯಿತು.
2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ **30(1)(X)** ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡುವ ಪರಿನಿಯಮದ ಪ್ರಕಾರ ಈ ಕೆಳಗಿನ ಆರು ಮಂದಿ ವಿದ್ಯಾರ್ಥಿ

ಪ್ರತಿನಿಧಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸದಸ್ಯರುಗಳನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

a) **ಶ್ರೀ ನಿಹಾರ್ ಎನ್. ಗಾವ್ಕರ್,** ಪ್ರಥಮ ಎಂ.ಎಸ್.ಸ್ಸಿ.,ಅನ್ವಯಿಕ ಸಸ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ -574199 **(ಎನ್.ಸಿ.ಸಿ ವಿದ್ಯಾರ್ಥಿ).**

b) **ಶ್ರೀ ಹೃಷಿಕೇಶ್,** ದ್ವಿತೀಯ ಬಿ.ಬಿ.ಎ., ಶ್ರೀ ಎಸ್.ಡಿ.ಎಂ. ಕಾಲೇಜ್ ಅಫ್ ಬಿಸಿನೆಸ್ ಮ್ಯಾನೇಜ್ ಮೆಂಟ್, ಮಂಗಳೂರು. **(ಎನ್.ಎಸ್.ಎಸ್. ವಿದ್ಯಾರ್ಥಿ)**

c) **ಶ್ರೀ ಸಂಜಯ್ ಎಂ. ಶೆಟ್ಟಿ,** ದ್ವಿತೀಯ ಬಿ.ಸಿ.ಎ., ಕೆನರಾ ವಿಕಾಸ್ ಪ್ರಥಮ ದರ್ಜೆ ಕಾಲೇಜು, ವಿಮಾನ ನಿಲ್ದಾಣ ರಸ್ತೆ, ಗುರುನಗರ, ಮೇರಿಹಿಲ್, ಮಂಗಳೂರು-575008.. **(ಕ್ರೀಡಾ ವಿದ್ಯಾರ್ಥಿ).**

d) **ಕು. ವರೇಣ್ಯ ಬಿ.,** ದ್ವಿತೀಯ ಎಂ.ಎಸ್ಸಿ. ಗಣಿತ ಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-574199. **(ಸ್ನಾತಕೋತ್ತರ ವಿದ್ಯಾರ್ಥಿ).**

e) **ಕು. ಪೃಥ್ವಿ ದೀಕ್ಷಾ,** ಸಂಶೋಧನಾ ವಿದ್ಯಾರ್ಥಿ, ವ್ಯವಹಾರ ಆಡಳಿತ ವಿಭಾಗ (ಪ್ರವಾಸೋದ್ಯಮ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-574199. **(ಸಂಶೋಧನಾ ವಿದ್ಯಾರ್ಥಿ).**

f) **ಕು. ಶ್ರದ್ಧಾ ಆರ್.,** ತೃತೀಯ ಬಿ.ಬಿ.ಎ. ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು, ಕುಂದಾಪುರ-576201 **(ಪದವಿ ವಿದ್ಯಾರ್ಥಿ).**

ಪ್ರಥಮ ಬಾರಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಭಾಗವಹಿಸುತ್ತಿರುವ ಇವರೆಲ್ಲರನ್ನೂ ಶೈಕ್ಷಣಿಕ ಮಂಡಳಿ ಸಭೆಗೆ ಸ್ವಾಗತಿಸಲಾಯಿತು.

- **ಕೃತಜ್ಞತೆಗಳು:**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(ii) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸದಸ್ಯರಾಗಿರುವ ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಮಂಗಳೂರು

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಲು ಪ್ರತ್ಯಾಯೋಜಿಸಲಾಗಿದ್ದ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಾಗಿದ್ದ ಡಾ. ರಾಮೇಗೌಡ ಎಂ, ಇವರು ಸೇವಾ ವಯೋನಿವೃತ್ತಿ ಹೊಂದಿರುತ್ತಾರೆ.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 30(1)(vi) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ **ಫಾ. ಡಾ. ಮೈಕಲ್ ಸಾಂತುಮಯೋರ್**, ಪ್ರಾಂಶುಪಾಲರು, ಮಿಲಾಗ್ರಿಸ್ ಕಾಲೇಜು, ಹಂಪನಕಟ್ಟೆ, ಮಂಗಳೂರು ಹಾಗೂ **ಡಾ.ಶಂಕರಮೂರ್ತಿ ಹೆಚ್. ಕೆ.**, ಪ್ರಾಂಶುಪಾಲರು, ಆಳ್ವಾಸ್ ಕಾಲೇಜ್ ಆಫ್ ಎಜ್ಯುಕೇಶನ್, ಮೂಡಬಿದಿರೆ ಇವರುಗಳ ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಶೈಕ್ಷಣಿಕ ಮಂಡಳಿ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

ಇವರೆಲ್ಲರೂ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುತ್ತಾರೆ. ಇವರಿಗೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಯ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## ಪ್ರಸ್ತಾವಿಕ

ಈ ಕೆಳಕಂಡ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.

- ದಿನಾಂಕ 29.03.2025 ರಂದು ನಡೆಯಲಿರುವ 43ನೇ ವಾರ್ಷಿಕ ಘಟಿಕೋತ್ಸವದ ಆಹ್ವಾನ ಪತ್ರಿಕೆಗಳನ್ನು ಈಗಾಗಲೇ ಕಳುಹಿಸಲಾಗಿದ್ದು, ಮತ್ತೊಮ್ಮೆ ಎಲ್ಲಾ ಶೈಕ್ಷಣಿಕ ಮಂಡಳಿಯ ಸದಸ್ಯರನ್ನು ಘಟಿಕೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.
- ದಿನಾಂಕ 28.03.2025 ರಂದು ಪೂರ್ವಾಹ್ನ 11.00 ಗಂಟೆಗೆ ಘಟಿಕೋತ್ಸವದ ಪೂರ್ವಭಾವಿಯಾಗಿ ನಡೆಯಲಿರುವ ಶೈಕ್ಷಣಿಕ ಮಂಡಳಿಯ ತೃತೀಯ ವಿಶೇಷ ಸಭೆಯ ವಿವರವನ್ನು ಸಭೆಗೆ ನೀಡಲಾಯಿತು.

- ಈಗಾಗಲೇ ಪ್ರಥಮ ಹಾಗೂ ಐದನೇ ಸೆಮಿಸ್ಟರ್ ಪದವಿ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, 3ನೇ ಹಾಗೂ 7ನೇ ಸೆಮಿಸ್ಟರ್ ಪದವಿ ಪರೀಕ್ಷೆಗಳ ಫಲಿತಾಂಶವನ್ನು ಇನ್ನೆರಡು ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಸಭೆಗೆ ತಿಳಿಸಲಾಯಿತು.

- 2023-24ನೇ ಸಾಲಿಗೆ ಸರ್ಕಾರದಿಂದ ನಿವೃತ್ತಿ ಉಪದಾನ ರೂ.11.30 ಕೋಟಿ ಬಿಡುಗಡೆಯಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. 2021-22, 2022-23 ಹಾಗೂ 2023-24ನೇ ಸಾಲಿನಲ್ಲಿ ನಿವೃತ್ತರಾದ ಶಿಕ್ಷಕ ಹಾಗೂ ಶಿಕ್ಷಕೇತರರಿಗೆ ನಿವೃತ್ತಿ ಉಪದಾನವನ್ನು ನೀಡಿರುವ ಬಗ್ಗೆ ಸಭೆಗೆ ತಿಳಿಸಲಾಯಿತು.

**I. ದಿನಾಂಕ 8.01.2025 ರಂದು ನಡೆದ ಶೈಕ್ಷಣಿಕ ಮಂಡಳಿಯ 2024-25ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.**

-ದೃಢೀಕರಿಸಲಾಯಿತು.-

**II. ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ವಿನಿಯಮಗಳು /ಪರಿನಿಯಮಗಳು**

-ಯಾವುದೂ ಇರುವುದಿಲ್ಲ.-

**III. ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು:**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ.:4:1 (2024-25)

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ-2020ರ ಪದವಿ ಕಾರ್ಯಕ್ರಮಗಳ - ರ‍್ಯಾಂಕ್ ಘೋಷಣೆಗೆ ಸಂಬಂಧಿಸಿದ ಮಾರ್ಗಸೂಚಿಯ ಅನುಮೋದನೆ ಬಗ್ಗೆ

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ.4:2 (2024-25)

**ವಿಷಯ:** ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಅನ್ವಯವಾಗುವ ಬಿ.ಕಾಂ. ಪದವಿ ಕಾರ್ಯಕ್ರಮದ ದ್ವಿತೀಯ ಸೆಮಿಸ್ಟರ್ ಪಠ್ಯಕ್ರಮದ ಘಟನೋತ್ತರ ಅನುಮೋದನೆ ಮತ್ತು ಶೈಕ್ಷಣಿಕ ವರ್ಷ 2025-26ನೇ ಸಾಲಿಗೆ ಅನ್ವಯವಾಗುವ ಪ್ರಥಮ ಸೆಮಿಸ್ಟರ್ ಬಿ.ಕಾಂ. ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಸದರಿ ಕಾರ್ಯಕ್ರಮದ ಕಾರ್ಯಯೋಜನೆಯಲ್ಲಿ Compulsory ವಿಷಯದಡಿಯಲ್ಲಿ ಬರುವ ಪತ್ರಿಕೆಯ ಶಿರೋನಾಮೆಯನ್ನು Constitutional Values ಎಂಬುದಾಗಿ ತಿದ್ದುಪಡಿ ಮಾಡುವ ಷರತ್ತಿಗೊಳಪಟ್ಟು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಶೈ.ಮ.ಸಾ.ಸ.4:3 (2024-25)

ವಿಷಯ: ರಾಜ್ಯ ಶಿಕ್ಷಣ ನೀತಿ ಆಯೋಗದ ಮಾರ್ಗಸೂಚಿ ಪ್ರಕಾರ ತಯಾರಿಸಿರುವ ಬಿ.ಕಾಂ. (ವೋಕೇಶನಲ್) ಕಂಪ್ಯೂಟರ್ ಅಪ್ಲಿಕೇಶನ್ಸ್ ಪದವಿ ಕಾರ್ಯಕ್ರಮದ ದ್ವಿತೀಯ ಸೆಮಿಸ್ಟರ್‌ನ ಪಠ್ಯಕ್ರಮದ ಘಟನೋತ್ತರ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಶೈ.ಮ.ಸಾ.ಸ.4:4 (2024-25)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Heartfulness Chair ಸ್ಥಾಪನೆ ಬಗ್ಗೆ ಪರಿಷ್ಕರಣೆ ಮಾಡಿ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಕುರಿತು.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಶೈ.ಮ.ಸಾ.ಸ 4:5 (2024-25)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕುಂದಾಪುರ ಕನ್ನಡ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತು ರಚಿಸಲಾದ ಕರಡು ಪರಿನಿಯಮವನ್ನು ಅನುಮೋದಿಸುವ ಕುರಿತು.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಶೈ.ಮ.ಸಾ.ಸ.4:6 (2024-25)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬ್ಯಾರಿ ಅಧ್ಯಯನ ಪೀಠಸ್ಥಾಪನೆ ಬಗ್ಗೆ ಪರಿಷ್ಕರಣೆ ಮಾಡಿ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಕುರಿತು.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಶೈ.ಮ.ಸಾ.ಸ.4:7 (2024-25)

ವಿಷಯ: ಶೈಕ್ಷಣಿಕ ವರ್ಷ 2024-25 ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ Post Doctoral ಕಾರ್ಯಕ್ರಮಕ್ಕೆ ವಿದೇಶಿ ವಿದ್ಯಾರ್ಥಿಯ ಪ್ರವೇಶಾತಿ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಇತರ ವಿಷಯಗಳು:

- ರಾಜ್ಯ ಶಿಕ್ಷಣ ನೀತಿ ಆಯೋಗದ ಶಿಫಾರಸ್ಸಿನನ್ವಯ ಪದವಿ ಕಾರ್ಯಕ್ರಮಗಳ Compulsory ಕೋರ್ಸ್ ನಡಿಯಲ್ಲಿ ಅಳವಡಿಸಲಾಗಿರುವ Constitutional Values ಪತ್ರಿಕೆಯನ್ನು ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ (M.A.in Political Science) ಹೊಂದಿರುವ ಉಪನ್ಯಾಸಕರೇ ಬೋಧಿಸಬೇಕೆಂಬುದಾಗಿ ಈಗಾಗಲೇ ಎಲ್ಲಾ ಕಾಲೇಜುಗಳಿಗೆ ತಿಳಿಸಲಾಗಿದ್ದರೂ ಮತ್ತೊಮ್ಮೆ ಈ ಬಗ್ಗೆ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ನಿರ್ದೇಶನ ನೀಡಲು ನಿರ್ಣಯಿಸಲಾಯಿತು.

- ಮುಂದಿನ ಶೈಕ್ಷಣಿಕ ವರ್ಷದಿಂದ B.Com (Vocational) Computer Application ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಅವರ ಅಂಕಪಟ್ಟಿಯಲ್ಲಿ B.Com (Vocational) Computer Application ಎಂದು ನಮೂದಿಸಲು ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

ಕುಲಸಚಿವರು ಶೈಕ್ಷಣಿಕ ಮಂಡಳಿ ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
**ಕುಲಸಚಿವರು**

ಸಹಿ/-
**ಕುಲಪತಿಗಳು.**